

ಬ್ಯಾಗುಗಳಿರಬೇಕು. ಹೀಗಾದರೆ ಅವನು ಮಧ್ಯಾಹ್ನದ ಹೊತ್ತು ಆ ಫುಟ್‌ಪಾತ್ ಅಂಚಿನಲ್ಲಿ ಕೂತು ಉಣ್ಣುವ ಮುಂಜಾನೆ ಕಟ್ಟಿ ತಂದಿದ್ದ ತಂಗಳದ ಅನ್ನ ಸಾರಿಗೆ ರುಚಿ ಸಿಗುತ್ತದೆ. ಗಿರಾಕಿಗಳಿಗಾಗಿ ಕಾಲದ ಹಂಗಿಲ್ಲದೆ ಕಾಯುವುದಕ್ಕೆ ಹುರುಪು ಬರುತ್ತದೆ.

ವೀರಭದ್ರೇಗೌಡರು ಈಗ ಕಿಟಕಿ ಬಳಿಯಿಂದ ಹಿಮ್ಮರಳಿ ಹಾಸಿಗೆಗೆ ಬಂದರು. ನಿನ್ನೆ ತಾನೆ ಸುರಿದ ಮಳೆಯಿಂದಾಗಿ ಇನ್ನೂ ತಂಪು ರೂಮೊಳಗೆ ಉಳಿದಿತ್ತು. ರಗ್ಗನ್ನು ಬಿಚ್ಚಿ ಮೈತುಂಬ ಹೊದ್ದುಕೊಂಡರು. ಹಾಲ್‌ನಲ್ಲಿ ಕೂತಿದ್ದಾಗ ಜೋಂಪು ಹತ್ತಿದಂತಿದ್ದ ಕಣ್ಣು ಕಿಟಕಿ ನೋಟದಿಂದಾಗಿ ರವರವವಾಗಿದ್ದವು. ಮನುಷ್ಯರಿಬ್ಬರನ್ನು ಬಯಲಿಗಿಳಿಸಿ ಹಿಂದಿನಿಂದ ಗುಂಡಿಕ್ಕಿ ಕೊಂದ ತಾಲಿಬಾನಿಗಳ ಕೃತ್ಯ ಕಂಡ ಕಣ್ಣುಗಳ ರವರವವೇ ಈಗ ಮತ್ತೊಮ್ಮೆ ಮರುಕಳಿಸಿದಂತಾಗಿತ್ತು. ಈಗ ಮೈಚಾಚಿ ಎರಡು ಮೂರು ಗಂಟೆ ಧ್ಯಾನಿಸಿದರೂ ನಿದ್ದೆ ಸುಳಿಯಲೊಲ್ಲದೆಂದು ಗೊತ್ತಿತ್ತು. ಅಂಗಾತ ಮಲಗಿ ಮುಖದ ತುಂಬ ರಗ್ಗೆಳೆದು ಕಣ್ಣುಗುಡ್ಡೆಗಳ ಮೇಲೆ ರೆಪ್ಪೆಗಳನ್ನು ಹಿತವಾಗಿ ಒತ್ತಿ ಒತ್ತಿ ರಮಿಸತೊಡಗಿದರು.

ಆಗ ಉದ್ಯೋಗಕ್ಕೆ ಸೇರಿದ ಆರಂಭದಲ್ಲಿ ಅಪ್ಪ 'ಪಕ್ಕದ ಹೊಲದ ಶಂಕರಯ್ಯ ತನ್ನ ಐದಾರು ಎಕರೆ ಜಮೀನು ಮಾರುತ್ತಾರೆ, ನೀನು ತಕ್ಕೊ' ಅಂತ ಒತ್ತಾಯ ಮಾಡಿದ್ದ. ನೌಕರಿಗೆ ಸೇರಿ ಮೂರ್ನಾಕು ವರ್ಷವೂ ಮುಗಿದಿಲ್ಲ. ಆಗಲೇ ಹಣ ಕೂಡಿಟ್ಟುಕೊಂಡುಬಿಟ್ಟಿದ್ದಾನೆಂಬುದು ಅಪ್ಪನ ಭ್ರಮೆ ಅಂತನಿಸಿ ಅಸಹನೆಯಿಂದ ರೇಗಿ ಆಗ ಅಪ್ಪನ ಬಾಯಿ ಮುಚ್ಚಿಸಲಾಗಿತ್ತು.

ಮುಸುಕುಗೊಂಡ ರಗ್ಗೊಳಗೆ ನೆನಪು ತೆರೆಯತೊಡಗಿತ್ತಲ್ಲ. ಆ ಹತ್ತಾರು ಎಕರೆಯ ಜಮೀನಿನ ಸುತ್ತ ಬೇಲಿ. ಬೇಲಿ ಸಾಲಿನಲ್ಲಿ ಗಾಳಿ ಮಳೆ ತಡೆದು ನಿಲ್ಲಿಸುವ ಗಿಡ ಮರಗಳ ಸಾಲು. ಜಮೀನಿನ ಮಧ್ಯದಲ್ಲೊಂದು ವಾಸಕ್ಕೆ ತಾರಸಿಮನೆ. ಯಥೇಚ್ಛ ನೀರಿಗಾಗಿ ಮೂರು ಬೋರ್‌ವೆಲ್‌ಗಳು. ಐದು ಎಕರೆ ತುಂಬ ಬಾಳೆ, ಅಡಿಕೆ, ತೆಂಗು. ಎರಡು ಎಕರೆಗೆ ನಿಂಬೆ, ದಾಳಿಂಬೆ, ಪಪ್ಪಾಯಿ, ಸಪೋಟ ಹಣ್ಣುಗಳ ಫಸಲು. ಎರಡು ಎಕರೆಗೆ ಸೇವಂತಿಗೆ, ಮಲ್ಲಿಗೆ, ಜಾಜಿ, ಗುಲಾಬಿ ಹೂ ಗಿಡಗಳು. ಮೂಲೆಗೆ ಮಾವಿನ ಗಿಡಗಳು... ಕುದಿವ ಮನಸ್ಸಿಗೆ ತಂಪೀಯಲು ಇನ್ನೇನು ಬೇಕು?

ಅವರ ಮನಸ್ಸು ತಿಳಿ ಗಾಳಿಯೊಂದಿಗೊಲಿಯುವ ಚಿಗುರಿನಂತಾಯಿತು. ಮುಸುಕು ತೆರೆಯಗೊಡದೆ ಮಗ್ಗುಲಿಗೆ ಹೊರಳಿದರು. ಅಜ್ಜಿ ನಮ್ಮ ಹಟ್ಟಿ ಮುಂದೆ ದೇವರ ಮೆರವಣಿಗೆಯನ್ನು ನಿಲ್ಲಿಸಿ, ಅಡ್ಡೆ ಮುಂದೆ ಮಣೇವು ಹಾಕಿಸಿದ್ದಳು. ಅಪ್ಪ ಸತ್ತಿಗೆ ದೇವರನ್ನು ತಲೆಮೇಲಿರಿಸಿಕೊಂಡು ಮೆರೆಸುತ್ತಿದ್ದ. ಆ ಸತ್ತಿಗೆ ಕಳಸಕ್ಕೆ ಜೋಡಿಸಿದ್ದ ದೊಡ್ಡಜಾಲರಿಗೆ ಸುತ್ತ ಕಟ್ಟಿದ್ದ ಗೊಂಡೆ ಹೂವುಗಳು, ಸತ್ತಿಗೆಪಟ್ಟೆಗೆ ಮಡಚಿ ಉದ್ದ ತೂಗುಬಿಟ್ಟಿದ್ದ ಬಣ್ಣಬಣ್ಣದ ಜರಿ ವಸ್ತ್ರಗಳು. ಅವನು ಕುಣಿಯುತ್ತ ಜರಿಕಿ ಹೊಡೆದರೆ ಸಾಕು ಆ ಗೊಂಡೆ ಹೂವು, ಜರಿವಸ್ತ್ರಗಳು ತೂಗಾಡುತ್ತ ಹರಡಿಕೊಂಡು ಜೋಕಾಲಿ ಹೊಡೆದು ಒಂದಕ್ಕೊಂದು ಉಡಕೊಂಡು ಮತ್ತೆ ಅದೇ ಲಯವೇಗದಲ್ಲಿ ಬಿಚ್ಚಿ ಚೆಲ್ಲನೆ ಹರಡಿಕೊಳ್ಳುತ್ತಿದ್ದವು. ಅಪ್ಪನ ಕುಣಿತದ ಆವೇಶ ಕಂಡು ಅಜ್ಜಿ ಜಗಲಿ ಮೇಲೆ ನಿಂತು 'ಲೋ ಕಾಡ, ಮೊಳ್ಳಯ್ಯ ಸಾಕು, ಸಾಕು, ಮೊದ್ಲು ಅವನಿಂದ ಸತ್ತಿಗೆ ಬಿಡಿಸ್ರೊ' ಅಂತ ಕೂಗಿಕೊಳ್ಳುತ್ತಿದ್ದಳು. ಮೊದಲು ತರುಣದಲ್ಲಿ ಗುಡ್ಡ ಕುಣಿಯುತ್ತಿದ್ದ